**ಸಾಕ್ಷಿಗೆ ದಿನಾಂಕ 29.07.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ. ಎ ಎನ್ ಹೆಚ್ ವಕೀಲರಿಂದಃ**

1. ನಾನು ಅರ್ಜಿದಾರರಿಗೆ ಮೂಲತಃ ಚಿಕಿತ್ಸೆಯನ್ನು ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರಿಗೆ ಸಂಬಂಧಿಸಿದ ಡಿಸ್ಚಾರ್ಜ್ ಸಮರಿ ಮತ್ತು ಗಾಯದ ಪ್ರಮಾಣ ಪತ್ರ ದಾಖಲೆಗಳನ್ನು ನೋಡಿರುತ್ತೇನೆ. ನಾನು ಯಾವುದೇ ಮೆಡಿಕಲ್ ಬೋರ್ಡ್ ಗೆ ಸದಸ್ಯನಾಗಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ದೈಹಿಕ ಅಂಗನ್ಯೂನತಾ ಪ್ರಮಾಣಪತ್ರ ನೀಡಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಉಂಟಾಗಿದ್ದ ಮೂಳೆ ಮುರಿತ ಕೂಡಿಕೊಂಡಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 8ನೇ ಖಂಡಿಕೆಯಲ್ಲಿ ನಮೂದು ಮಾಡಿರುವ ತೊಂದರೆಗೆ ಬೆಲ್ಟ್ ಉಪಯೋಗಿಸುವಂತೆ ಸಲಹೆ ನೀಡಿರುತ್ತೇನೆ. ಸದರಿ ಬೆಲ್ಟ್ ನ್ನು ಶಾಶ್ವತವಾಗಿ ಹಾಕಿಕೊಳ್ಳಬೇಕು. ಅರ್ಜಿದಾರರಿಗೆ ಮುಂದುವರೆದ ಚಿಕಿತ್ಸೆ ಅವಶ್ಯಕತೆ ಇರುವುದಿಲ್ಲ. ನಾನು ಅರ್ಜಿದಾರರ ದೈಹಿಕ ಅಂಗನ್ಯೂನತೆಯನ್ನು ಮಾತ್ರ ನಿರ್ಧರಿಸಿರುತ್ತೇನೆ ಎಂದರೆ ಸರಿ. ನಿಯಾಮವಳಿಯ ಪ್ರಕಾರ ಸಂಪೂರ್ಣ ದೇಹಕ್ಕೆ ಅಂಗನ್ಯೂನತೆ ಶೇಕಡಾ ಪ್ರಮಾಣವನ್ನು ನಿರ್ಧರಿಸುವಂತಿಲ್ಲ ಎಂದರೆ ಸರಿ. ಅರ್ಜಿದಾರರು ದೈನಂದಿನ ಕೆಲಸಗಳನ್ನು ಕಷ್ಟದಿಂದ ಮಾಡಬಹುದು. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚು ಅಂಗನ್ಯೂನ್ಯತಾ ಶೇಕಡವನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರರನ್ನು ಕೂಗಿಸಲಾಯಿತು ಗೈರುಹಾಜರಿರುತ್ತಾರೆ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**